ಡಯಟ್ ನ ಪಾತ್ರ ಹಾಗೂ ಕಾರ್ಯಗಳು ಅಧ್ಯಾಯ ಒಳಗೊಂಡಿರುವ ಎಲ್ಲ ಶೀರ್ಷಿಕೆಗಳನ್ನೂ ಓದಿ ಕೆಳಗಿನ ಯಾವುದಾದರೂ ಒಂದು ಪ್ರಶ್ನೆ ಕುರಿತಂತೆ ನಿಮ್ಮ ವಿಚಾರಗಳನ್ನು ಬರೆಯಿರಿ. ನಿಮ್ಮ ಉತ್ತರಕ್ಕೆ ಬೆಂಬಲವಾಗಿರುವ ವಿಷಯಗಳನ್ನು ಉದ್ಧರಿಸಿ. ವಿವಿಧ ಬೆಳವಣಿಗೆಗಳ ಇಸವಿಗಳನ್ನು , ನೀವು ಉದ್ಧರಿಸುವ ಪುಸ್ತಕ, ಲೇಖನಗಳು ಪ್ರಕಟವಾದ ಇಸವಿಗಳನ್ನು ಆವರಣದಲ್ಲಿ ನೀಡಿ. ಉದಾ: (ಶರ್ಮಾ, 2004). ನಿಮ್ಮ ಪ್ರಬಂಧದ ಕೊನೆಯಲ್ಲಿ ಆಕರ ಗ್ರಂಥಗಳ ಪಟ್ಟಿಯೂ ಇರಲಿ. ಇಡೀ ಪ್ರಬಂಧವು 2000 ಪದಗಳ ಮಿತಿ ಮೀರದಿರಲಿ. ಅಗತ್ಯ ಅಂಕಿ ಅಂಶ, ಕೋಷ್ಟಕಗಳನ್ನು ನೀಡಿ. ಈ ನಿಯೋಜಿತ ಕಾರ್ಯವನ್ನು ಪೂರ್ತಿ ಮಾಡುವಾಗ ಒಂದು ಪಾಂಡಿತ್ಯ ಪೂರ್ಣವಾದ ಪ್ರಬಂಧ ತಯಾರಾಗಬೇಕು. ಅಂತಹ ಪ್ರಬಂಧಗಳನ್ನು ರಚಿಸಿ ವಿವಿಧ ಜರ್ನಲ್ ಗಳಲ್ಲಿ ಪ್ರಕಟಿಸುವುದು ನಮ್ಮ ಶೈಕ್ಷಣಿಕ ಚಟುವಟಿಕೆಗಳ ಒಂದು ಭಾಗವೇ ಆಗಿದೆ. ಈ ಪ್ರಬಂಧ ರಚನೆ ನಿಮಗೆ ಅಂತಹ ಬರವಣಿಗೆಯಲ್ಲಿ ಅಭ್ಯಾಸ ನೀಡುವಂತಾಗಬೇಕು ಎನ್ನುವುದು ಆಶಯ. **ಅತ್ಯುತ್ತಮವಾದ ಬರಹಗಳನ್ನು ಈ ವಿಭಾಗದಲ್ಲಿ ಎಲ್ಲ ಓದುಗರಿಗೂ ಲಭ್ಯವಾಗುವಂತೆ ಅಪ್‌ಲೋಡ್ ಮಾಡಲಾಗುವುದು. ನಿಮ್ಮ ಪ್ರಬಂಧ ಇಂಗ್ಲಿಷ್ ಅಥವಾ ಕನ್ನಡದಲ್ಲಿ ಇರಬಹುದು.**

1. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ಶಿಕ್ಷಣದ ಗುಣಾತ್ಮಕತೆ ಹೆಚ್ಚಿಸುವಲ್ಲಿ ಡಯಟ್ ನ ಪಾತ್ರವನ್ನು ಆರ್ ಟಿ ಇ 2009 ಹಾಗೂ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ರ ಹಿನ್ನೆಲೆಯಲ್ಲಿ ಹೇಗೆ ಅರ್ಥ ಮಾಡಿಕೊಳ್ಳಬಹುದು? ಇವು ಡಯಟ್ ಗಳನ್ನು ಸ್ಥಾಪಿಸಿದ ಸಂದರ್ಭದಲ್ಲಿ ಇದ್ದ ಆಶಯಗಳಿಗಿಂತ ಎಷ್ಟರ ಮಟ್ಟಿಗೆ ಭಿನ್ನವಾಗಿವೆ ಎನಿಸುತ್ತದೆ?

ಅಥವಾ

2. ಶಿಕ್ಷಣ ವಿಕೇಂದ್ರೀಕರಣಕ್ಕೆ ಡಯಟ್ ಗಳು ಪೂರಕವಾಗಿ ಕೆಲಸ ಮಾಡುತ್ತವೆ ಎಂದು ಆಶಿಸಲಾಗಿತ್ತು. ಡಯಟ್‌ಗಳ ಸ್ಥಾಪನೆಯ ಬಳಿಕ ಶಿಕ್ಷಣ ವಿಕೇಂದ್ರೀಕರಣ ಎಷ್ಟರ ಮಟ್ಟಿಗೆ ಆಗಿದೆ ಎನಿಸುತ್ತದೆ? ಈಗಿರುವಂತೆ ಜಿಲ್ಲೆಯ ಶಿಕ್ಷಣ ನಿರ್ವಹಣೆಯ ಒಟ್ಟೂ ಜವಾಬ್ದಾರಿಯನ್ನು ಡಯಟ್ ಗಳಿಗೇ ನೀಡಿದರೆ ಅವು ಅದನ್ನು ಯಶಸ್ವಿಯಾಗಿ ನಿಭಾಯಿಸಬಲ್ಲವೇ? ಆ ರೀತಿ ಆಗಬೇಕಾದರೆ ಡಯಟ್ ಗಳು ತಮ್ಮನ್ನು ತಾವು ಯಾವ ಯಾವ ಕ್ಷೇತ್ರಗಳಲ್ಲಿ ಸಬಲೀಕರಿಸಿಕೊಳ್ಳಬೇಕಾಗಿದೆ?

ಅಥವಾ

3. ಡಯಟ್ ಗಳಲ್ಲಿ ಕರ್ತವ್ಯ ನಿರ್ವಹಿಸುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಲ್ಲಿ ಇರಬೇಕಾದ ವಿವಿಧ ಸಾಮರ್ಥ್ಯಗಳಾವುವು? ಈ ಕುರಿತಂತೆ ಸದ್ಯದ ಪರಿಸ್ಥಿತಿ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ. ಡಯಟ್ ಸಿಬ್ಬಂದಿ ನಿರೀಕ್ಷಿತ ಮಟ್ಟದಲ್ಲಿ ಪರಿಣಾಮಕಾರಿಯಾಗಲು ಸಾಧ್ಯವಾಗದಿರುವುದಕ್ಕೆ ಕಾರಣಗಳನ್ನು ಪಟ್ಟಿ ಮಾಡಿ. ಈ ಸಮಸ್ಯೆ ನಿವಾರಿಸಲು ಏನು ಮಾಡಬಹುದು?

ಅಥವಾ

4. ದೇಶದ ಶಿಕ್ಷಣ ವ್ಯವಸ್ಥೆಯನ್ನು ಪ್ರಜಾಸತ್ತಾತ್ಮಕ ಆಶಯಗಳ ನೆಲೆಯಲ್ಲಿ ರೂಪಿಸಲು ಡಯಟ್ ಗಳು ಯಾವ ರೀತಿಯಲ್ಲಿ ಸಹಕಾರಿಯಾಗಬಲ್ಲವು? ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಜಾಸತ್ತಾತ್ಮಕತೆಯ ಅಳವಡಿಕೆ ಅಂದರೇನು ಎನ್ನುವುದನ್ನು ಮೊದಲಿಗೆ ವ್ಯಾಖ್ಯಾನಿಸಿಕೊಂಡು ಬಳಿಕ ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯ ಹಾಗೂ ಇತರ ಎಲ್ಲ ಭಾಗೀದಾರರನ್ನು ಒಳಗೊಳ್ಳುವಿಕೆ ಸಾಧಿಸುವಲ್ಲಿ ಡಯಟ್‌ಗಳ ಪಾತ್ರವೇನು ಎಂದು ಚರ್ಚಿಸಿ.